**ಸಾಕ್ಷಿಯನ್ನು ಅರ್ಜಿಯ ಮೇರೆಗೆ ದಿನಾಂಕ: 06.01.2026 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 10 ನೇ ಪ್ರತಿವಾದಿಗಳ ಪರ ಶ್ರೀ RPS ವಕೀಲರಿಂದಃ**

ನಮ್ಮ ಅಣ್ಣ ಗಂಗಪ್ಪ ಇವರು ಸರ್ವೆ ನಂ. 10/3ಬಿ+4 ಹಾಗೂ 10/2 ನ್ನು 10 ನೇ ಪ್ರತಿವಾದಿಗೆ ಎಷ್ಟು ಹಣಕ್ಕೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹೀಗೆ ಸದರಿ ಆಸ್ತಿಗಳನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ ಸದರಿ ಆಸ್ತಿಗಳ ದಾಖಲೆಗಳಲ್ಲಿ ನಮ್ಮ ಅಣ್ಣನ ಹೆಸರು ಕಡಿಮೆ ಆಗಿ 10ನೇ ಪ್ರತಿವಾದಿಯ ಹೆಸರು ದಾಖಲು ಆಗಿರುತ್ತವೆ ಎಂದರೆ ಸರಿಯಲ್ಲ. ಸರ್ವೆ ನಂ. 10/3ಬಿ+4 ಹಾಗೂ 10/2 ಆಸ್ತಿಗಳಿಗೆ ಸಂಬಂಧಿಸಿದ ಉತಾರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ 12 ರಲ್ಲಿ ನಮ್ಮ ಅಣ್ಣನ ಹೆಸರು ಕಡಿಮೆ ಆಗಿ 10 ನೇ ಪ್ರತಿವಾದಿಯ ಹೆಸರು ದಾಖಲು ಇರುತ್ತದೆ ಎಂದರೆ ನಿಜ. ಅದೇ ರೀತಿ ಸರ್ವೆ ನಂ. 10/3ಬಿ+4 ರ ಉತಾರದಲ್ಲಿಯೂ ಸಹ 10 ನೇಪ ಪ್ರತಿವಾದಿಯ ಹೆಸರು ದಾಖಲು ಇರುತ್ತದೆ ಎಂದರೆ ನಿಜ. ಸದರಿ ಸರ್ವೆ ನಂ. 10/3ಬಿ+4 ಹಾಗೂ 10/2 ಗಳನ್ನು ಖರೀದಿ ಮಾಡಿದಾಗಿನಿಂದಲೂ ಇವತ್ತಿನವರೆಗೂ 10 ನೇ ಪ್ರತಿವಾದಿಯೇ ಕಬ್ಜಾದಲ್ಲಿರುತ್ತಾರೆ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿ ನಮ್ಮ ಕಬ್ಜಾಗೆ ತಕರಾರು ಮಾಡಿರುತ್ತಾರೆ. ಹೀಗೆ ನಮ್ಮ ಕಬ್ಜಾಗೆ ತಕರಾರು ಮಾಡಿದ ನಿಖರವಾದ ದಿನಾಂಕ ನನಗೆ ಈಗ ನೆನಪಿರುವುದಿಲ್ಲ. ಹೀಗೆ ತಕರಾರು ಮಾಡಿದ್ದರ ಕುರಿತು ನಾನು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ಸರ್ವೆ ನಂ. 10/3ಬಿ+4 ಹಾಗೂ 10/2 ಗಳಲ್ಲಿ 10 ನೇ ಪ್ರತಿವಾದಿಯಹೆಸರು ದಾಖಲು ಆಗಿದ್ದು ಗೊತ್ತಾದ ನಂತರ ನಾನು ಅದನ್ನು ಪ್ರಶ್ನಿಸಿರುವುದಿಲ್ಲ. ಸದರಿ ವಿಷಯದ ಕುರಿತು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ.

ರಾಮಚಂದ್ರ ಅಪ್ಪಯ್ಯ ಆರೇರ ಇವರು 10 ನೇ ಪ್ರತಿವಾದಿಯ ಮಾವ. ಸದರಿಯವರು ತಿಗಡೊಳ್ಳಿ ಗ್ರಾಮದಲ್ಲಿಯೇ ವಾಸವಾಗಿದ್ದರು. ಸದರಿಯವರು ಮನೆಗೂ ನಮ್ಮ ಮನೆಗೂ ಒಂದೂವರೆ ಕಿಲೋ ಮೀಟರ ಅಂತರ ಆಗುತ್ತದೆ. ಸದರಿಯವರು ನಾನು 10-12 ವರ್ಷ ವಯಸ್ಸಿನವ ಇರುವಾಗಿಂದಲೂಪರಿಚಯ ಇರುತ್ತಾರೆ. 2007 ರಲ್ಲಿ ಸದರಿ ರಾಮಚಂದ್ರ ಇವರ ಜೊತೆಗೆ ದಾವಾ ಆಸ್ತಿಗಳು ಒಂದು ವ್ಯವಹಾರ ಆಗಿತ್ತು ಎಂದರೆ ಸಾಕ್ಷಿಯು ನಮ್ಮ ಆಸ್ತಿಗಳಲ್ಲಿ ಕರ್ನಾಟಕ ಸರ್ಕಾರ ಎಂದು ಇರುವ ಕಾರಣ ಸುಮಾರು 5 ವರ್ಷಗಳ ಕಾಲ ಅವರಿಗೆ ಉಳುಮೆ ಮಾಡಲು ಕೊಟ್ಟಿದ್ದೇವು. ಸದರಿ ವ್ಯವಹಾರವನ್ನು ನಮ್ಮ ಗಂಗಪ್ಪನನ್ನು ಹೊರತು ಪಡಿಸಿ ಉಳಿದ ನನ್ನ ಎಲ್ಲ ಅಣ್ಣತಮ್ಮಂದಿರು ಕೂಡಿ ಮಾಡಿರುತ್ತೇವೆ. ದಾವಾ ಆಸ್ತಿಗಳಲ್ಲಿರುವ ಕರ್ನಾಟಕ ಸರ್ಕಾರ ಎಂಬುದು ಕಡಿಮೆ ಆದ ನಂತರ ದಾವಾ ಆಸ್ತಿಗಳಲ್ಲಿ ಕೇವಲ ನಮ್ಮ ಅಣ್ಣ ಗಂಗಪ್ಪ ಇವನ ಹೆಸರು ಮಾತ್ರ ದಾಖಲು ಆಗಿರುತ್ತದೆ. ದಾವಾ ಆಸ್ತಿಗಳ ಕುರಿತು ಎಲ್ಲ ವ್ಯವಹಾರವನ್ನು ಗಂಗಪ್ಪ ಮಾತ್ರ ಮಾಡುತ್ತಿದ್ದನು ಎಂದರೆ ಸಾಕ್ಷಿಯು ಎಲ್ಲರೂ ಸೇರಿಯೇ ಮಾಡುತ್ತಿದ್ದೇವು ಎಂದು ಹೇಳುತ್ತಾರೆ. ನಮ್ಮ ಮನೆತನದ ಖರ್ಚನ್ನು ಎಲ್ಲರೂ ಬೇರೆ ಬೇರೆಯಾಗಿ ಮಾಡುತ್ತಿದ್ದೇವು. ನಾನು 15 ವರ್ಷದವನಿದ್ದಾಗಿನಿಂದ ಬೇರೆ ಬೇರೆ ಆಗಿ ವ್ಯವಹಾರವನ್ನು ಮಾಡುತ್ತಿದ್ದೇವೆ. ನಮ್ಮ ಮದುವೆಯನ್ನು ನಮ್ಮ ತಂದೆಯವರೇ ಮಾಡಿರುತ್ತಾರೆ. ನಾನು 15 ವರ್ಷದನಿದ್ದಾಗ ನನ್ನ ಮದುವೆ ಆಗಿರುತ್ತದೆ ಹಾಗೂ ಆ ಸಮಯದಲ್ಲಿ ನಾನು ಒಬ್ಬನೇ ಬೇರೆ ವಾಸವಾಗಿರುತ್ತೇನೆ. ಈ ವಿಷಯವನ್ನು ವಾದ ಪತ್ರದಲ್ಲಿ ಬರೆಯಿಸಲು ಹೇಳಿರುವುದಿಲ್ಲ. ವಾದ ಪತ್ರವನ್ನು ತಯಾರಿಸಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ವಾದ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಸರ್ವೆ ನಂ. 10/3ಬಿ+4 ಹಾಗೂ 10/2 ಇವು ನಮ್ಮ ಅಣ್ಣ ಗಂಗಪ್ಪ ಇವರ ಹೆಸರಿನಲ್ಲಿರುವುದರಿಂದ ಕಾನೂನುಬದ್ದವಾಗಿ ಸದರಿ ಆಸ್ತಿಗಳನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಿಜ. ಸಾಕ್ಷಿಯು ಮುಂದುವರೆದು

ನಾವು ಮಾರಾಟ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ನನ್ನನ್ನು ಹೊರತು ಪಡಿಸಿ ಉಳಿದ ಅಣ್ಣತಮ್ಮಂದಿರ ಎಲ್ಲ ಖರ್ಚನ್ನು ನಮ್ಮ ಅಣ್ಣ ಗಂಗಪ್ಪನೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಮಗಳು ಈಗ ತನ್ನ ತಾಯಿಯ ಜೊತೆ ಇರುತ್ತಾಳೆ. ಸದ್ಯ ನನ್ನ ಹೆಂಡತಿ ನನ್ನ ಜೊತೆಗೆ ಇರುವುದಿಲ್ಲ. ಹೀಗೆ ನಾನು ನನ್ನ ಹೆಂಡತಿಯ ಜೊತೆಗೆ ಇರದೇ ಸುಮಾರು 20 ವರ್ಷಗಳು ಆಗಿರುತ್ತವೆ. ನನ್ನ ಮಕ್ಕಳ ಹಾಗೂ ಹೆಂಡತಿಯ ಜೀವನಾಂಶವನ್ನು ನಾನೇ ನೋಡಿಕೊಳ್ಳುತ್ತೇನೆ. ನನ್ನ ಗಂಡು ಮಕ್ಕಳು ಒಬ್ಬ 30 ವರ್ಷ ಹಾಗೂ 25 ವರ್ಷ ಹಾಗೂ ಹೆಣ್ಣು ಮಗಳು 28 ವರ್ಷ ವಯಸ್ಸಿನವರು ಇರುತ್ತಾರೆ. ನನ್ನ ಮಗಳ ಮದುವೆ ಆಗಿರುತ್ತದೆ. 2019-2020 ರಲ್ಲಿ ನನ್ನ ಮಗಳ ಮದುವೆ ಆಗಿರುತ್ತದೆ. ನನ್ನ ಮಗಳ ಮದುವೆಯ ಖರ್ಚನ್ನು ನನ್ನ ಹೆಂಡತಿಯೇ ನೋಡಿಕೊಂಡಿರುತ್ತಾರೆ ಎಂದರೆ ನಿಜ. ನನ್ನ ಹೆಂಡತಿಗೆ ನಮ್ಮ ಅಣ್ಣ ಸ್ವಂತ ಸೋದರ ಮಾವನಾಗಬೇಕು. ನನ್ನ ಹೆಂಡತಿಯು 1ನೇ ವಾದಿಯ ಮಗಳು. ನನ್ನ ಮಗಳ ಎಲ್ಲಾ ಖರ್ಚನ್ನು ನಮ್ಮ ಅಣ್ಣ ಗಂಗಪ್ಪನೇ ನೋಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಾನು ಈ ಹೇಳಿದಂತೆ ನಮ್ಮ ಅಣ್ಣ ಗಂಗಪ್ಪ ಇವರು ತನ್ನ ಮನೆತನದ ಅಡಚಣೆ ಸಲುವಾಗಿ ಸರ್ವೆ ನಂ. 10/3ಬಿ+4 ಹಾಗೂ 10/2 ಗಳನ್ನು ಮಾರಾಟ ಮಾಡಿರುತ್ತಾನೆ ಎಂದು ಹೇಳಿದ ಸಮಯದಲ್ಲಿಯೇ ನನಗೂ ಹಣದ ಅಡಚಣೆ ಇತ್ತು ಎಂದರೆ ಸರಿಯಲ್ಲ. ಸರ್ವೆ ನಂ. 10/3ಬಿ+4 ಹಾಗೂ 10/2 ಗಳನ್ನು ಮಾರಾಟ ಮಾಡಿದ ಹಣದಿಂದಲೇ ನಮ್ಮ ಉಳಿದ ಅಣ್ಣತಮ್ಮಂದಿರ ಮಕ್ಕಳ ಮದುವೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸರ್ವೆ ನಂ. 10/3ಬಿ+4 ಹಾಗೂ 10/2 ಗಳನ್ನು 10 ನೇ ಪ್ರತಿವಾದಿಗೆ ನಾವೆಲ್ಲರೂ ಸೇರಿ ಮಾರಾಟ ಮಾಡಿದ್ದರೂ ಸಹ ಈಗ ನಾವು ಮಾರಾಟ ಮಾಡಿರುವುದಿಲ್ಲ ಎಂದು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಷಯ 1 ರಿಂದ 9 ರವರಿಗೆ

ಗೊತ್ತಿರುವುದರಿಂದ ಈ ದಾವೆಯಲ್ಲಿ ಹಾಜರಾಗಿರುವುದಿಲ್ಲ ಹಾಗೂ ಯಾವುದೇ ತಕರಾರನನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿಯಿಂದ ಇನ್ನೂ ಹೆಚ್ಚಿನ ಹಣ ಪಡೆಯುವ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿ 10 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**